official year in the year 1950-51. The number of cases shown pertains only to nine months in 1950. The offences relating to Prohibition were then entrusted to the Police Department which took over the administration of the Prohibition in the end of that year.

ಶ್ರೀ ಕುಂದೂರು ರುದ್ರಪ್ಪ.—ಚನ್ನಗಿರಿ ಮತ್ತು ದಾವಣಗೆರೆ ಕಡೆ ಮಂತ್ರಿಗಳು ಹೋದಾಗ ರೈತರಿಗೆ ಅನೇಕ ತೊಂದರೆಗಳು ಆಗುತ್ತಿವೆ ಎಂದು ಮನವಿ ಗಳನ್ನು ಕೊಟ್ಟಿದ್ದಾರಲ್ಲವೆ ?

Mr. SPEAKER.—That is outside the scope of the main question.

ಶ್ರೀಮತಿ ಬನವರಾಜೇಶ್ವರಿ.—ಪಾನಪ್ರತಿ ಬಂಧನ ವನ್ನು ಹೈದರಾಬಾದ್ ಕರ್ನಾಟಕದಲ್ಲಿ ಜಾರಿಗೆ ತರ ಬೇಕೆಂದು ಸರ್ಕಾರಕ್ಕೆ ಉಪ್ಸೇಶವಿದೆಯೇ !

ಅಧ್ಯಕ್ಷರು.—ಅದು ಈ ಪ್ರಶ್ನೆಗೆ ಸಂಬಂಧಪಡುವುದಿಲ್ಲ.

Sri F. H. MOHSIN.—When was prohibition introduced in Bombay-Karnatak ?

Mr. SPEAKER.—That is also outside the scope of the main question.

3 P.M.

Sri K. S. SURYANARAYANA RAO.—Has it come to the notice of the Government that in the guise of medicines, large quantity is smuggled outside State ?

Mr. SPEAKER.—It is also outside the scope of the main question.

ಶ್ರೀ ಎ. ಮುನಿಯಪ್ಪ.—ಕಳ್ಳಭಟ್ಟಿ ಸರಾಯಿ ಸಂಬಂಧದಲ್ಲಿ ಕಂಡು ಹಿಡಿದ ಕೇಸುಗಳ ಸಂಖ್ಯೆ ಎಷ್ಟು ಸ್ವಾಮಿ ?

Mr. SPEAKER.—That is also outside the scope of the question.

ಶ್ರೀ ಎಂ. ರಾಮಪ್ಪ.—ಕಳ್ಳ ಭಟ್ಟಿ ಸರಾಯಿ ಸಂಬಂಧದಲ್ಲಿ ಇಷ್ಟಕ್ಕಂಥ ಕೇಸುಗಳನ್ನ ವಾಪಸು ತೆಗೆದುಕೊಂಡಿಂಥವುಗಳು ಎಷ್ಟು ?

ಅಧ್ಯಕ್ಷರು.—ಇದು ಮೂಲಪ್ರಶ್ನೆಯಿಂದ ಉದ್ಭವಿಸು ವುದಿಲ್ಲ.

Sri K. S. SURYANARAYANA RAO.—Has it come to the notice of the Government that in view of large amount of illicit distillation, the general health standard has deteriorated ?

Mr. SPEAKER.—That is again outside the scope of the question.

ಶ್ರೀ ಬಿ. ಕೆ. ಪುಟ್ಟರಾಮಯ್ಯ.—ಸ್ವಾಮಿ, ಉತ್ತರ ದಲ್ಲಿ ಈ ಕೆಳಗೆ ಕಂಡ ಸ್ಥಳಗಳಲ್ಲಿ ಪಾನ ನಿರೋಧ ವನ್ನು ಜಾರಿಗೆ ತರಲಾಯಿತು ಎಂದು ಹೇಳಿದೆ. ಅದ ರಂತೆ ಚನ್ನಪಟ್ಟಣ ಮತ್ತು ರಾಮನಗರದಲ್ಲಿ ಪ್ರೊಹಿ ಬಿಶನ್ ಇಂಪ್ರಡ್ಯೂಸ್ ಮಾಡಿಲ್ಲ ಎಂದು ಆಗುತ್ತದೆ. ಆದರೆ ಚನ್ನಪಟ್ಟಣ ಮತ್ತು ರಾಮನಗರದಲ್ಲಿ illicit distillationಗೆ ಸಂಬಂಧಿಸಿದ ಕೇಸುಗಳನ್ನು ಹಾಕಿ ರುವದಕ್ಕೆ ಕಾರಣವೇನು, ಸ್ವಾಮಿ ?

Sri MOHAMED ALI.—Prohibition was introduced in Channapatna taluk in the year 1938.

Sri B. K. PUTTARAMIYA.—Why then, it is not included here ? When it is not included here, it means that there is no prohibition in Channapatna. But, cases are being put for prohibition offences. Why should you do it ?

Sri MOHAMED ALI.—Sir, prohibition has been introduced in Channapatna taluk and it is there since 1938. By some mistake it is not mentioned here.

Sri M. C. NARASIMHAN.—Is Neera being served in all these places ?

Mr. SPEAKER.—That is a different question. Question time is over.

Business of the House.

* Sri S. NIJALINGAPPA (Chief Minister).—Sir, regarding the hours of sitting of the House, there has been demand by a considerable section of the House that it would be convenient to most of the Members to meet from 1 to 6 P.M. My friend the Leader of the Opposition came to me and had discussion with me. I have considered the opinion of the House also. The general opinion seems to be that the House should meet from 1 P.M. and rise at 6 P.M. I think, Sir, the same may be adopted.

Sri K. KENCHAPPA (Hiriyur).—Yes, Sir.

ಶ್ರೀ ಬಿ. ಕೆ. ಪುಟ್ಟರಾಮಯ್ಯ (ಚನ್ನಪಟ್ಟಣ)—ಈಗ ಅಸೆಂಬ್ಲಿಯ ಅಧಿವೇಶನವು ಪ್ರಾರಂಭವಾಗಿ 30 ದಿವಸ ಎಂದರೆ ಒಂದು ತಿಂಗಳ ಮೇಲೆ ಆಯಿತು.

ಅಧ್ಯಕ್ಷರು.—ಈಗ ಈ ಸಭೆಯನ್ನು ಯಾವಾಗ ಪ್ರಾರಂಭಿಸಿ ಎಷ್ಟು ಗಂಟೆಯವರೆಗೆ ನಡೆಸಬೇಕು ಎಂಬ ವಿಷಯವು ಸಭೆಯ ಮುಂದೆ ಚರ್ಚೆಗೆ ಬಂದಿದೆ. ಇದಕ್ಕೆ ಸಂಬಂಧಪಟ್ಟದ್ದು ಏನಾದರೂ ಹೇಳುವು ದಿದ್ದರೆ ಹೇಳಬಹುದು. ಇದಲ್ಲದೆ ಬೇರೆ ಯಾವ ದಾದರೂ ವಿಷಯವಿದ್ದರೆ, ಸದ್ಯಕ್ಕೆ ಚರ್ಚಿಸಲ್ಪಡುತ್ತಿ ರುವ ವಿಷಯವು ಮುಗಿದ ಅನಂತರ ಅದನ್ನು ತೆಗೆದು ಕೊಳ್ಳೋಣ. ಮಧ್ಯೆ ಮತ್ತೊಂದು ವಿಷಯವನ್ನು ಸೇರಿಸಬಾರದು.

ಈಗ ಮುಖ್ಯ ಮಂತ್ರಿಗಳು ಸೂಚಿಸಿದಂತೆ ಸಭೆ ಯನ್ನು ಮಧ್ಯಾಹ್ನ ಒಂದು ಗಂಟೆಗೆ ಪ್ರಾರಂಭಿಸಿ ಆರು ಗಂಟೆಯವರೆಗೆ ಕುಳಿತು ಕೊಳ್ಳೋಣ. ಶನಿ ವಾರದ ದಿವಸ ಮಾತ್ರ ಎಂದಿನಂತೆ ಮುಂಜಾನೆ 8½ ಗಂಟೆಗೆ ಪ್ರಾರಂಭವಾಗಿ 12½ ಗಂಟೆಯವರೆಗೆ ಸಭೆ ನಡೆಯುವುದು.